WEDNESDAY 04.06.2025 Pg.01

'ಸಮಸ್ಯೆ ನಿವಾರಣೆಗೆ ಬೇಕಿದೆ ರಕ್ಷಣಾ ವಿಧಾನ'

■ ವಿಕ ಸುದ್ದಿಲೋಕ ಬೆಂಗಳೂರು

''ಜಲಾನಯನ ಪ್ರದೇಶದಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ನಿಖರವಾದ ಭೂ ಹಾಗೂ ನೀರು ಸಂರಕ್ಷಣೆ ವಿಧಾನಗಳನ್ನು ಆಯ್ಕೆ ಮಾಡಿ ಅನುಷ್ಠಾನಗೊಳಿಸುವುದು ಅಗತ್ಯ'' ಎಂದು ಭೂ ಸಂಪನ್ಮೂಲ ಇಲಾಖೆಯ ಜಂಟಿ ಕಾರ್ಯದರ್ಶಿ ನಿತಿನ್‌ಖಾಡೆ ಅಭಿಪ್ರಾಯಪಟ್ಟರು.

ಬೆಂಗಳೂರು ಕೃಷಿ ವಿವಿಯು ಇದೇ ಮೊದಲ ಬಾರಿಗೆ ಆಯೋಜಿಸಿದ್ದ 'ರಾಷ್ಟ್ರದಲ್ಲಿ ಸುಸ್ಥಿರ ಜಲಾನಯನ ನಿರ್ವಹಣೆಗಾಗಿ ಭೂ ಸಂಪನ್ಮೂಲ ಇನ್ವೆಂಟರಿ' ಕುರಿತ ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಂಗಳವಾರ ಅವರು ಮಾತನಾಡಿದರು.



'''ಜಲಾನಯನ ಪ್ರದೇಶದಲ್ಲಿ ಬರುವ ಸರ್ವೆ ಆಧಾರದಲ್ಲಿ ನಿರ್ದಿಷ್ಟ ಸಮಸ್ಯೆಗಳನ್ನು ಮತ್ತು ಅವುಗಳ ಕಾರಣಗಳನ್ನು ಭೂ ಸಂಪನ್ಮೂಲ ಸಮೀಕ್ಷೆ ಹಾಗೂ ಜಲವಿಜ್ಞಾನ ಅಧ್ಯಯನಗಳಿಂದ ತಿಳಿಯಲಾಗುತ್ತದೆ. ಜಲಾನಯನ ಪ್ರದೇಶದಿಂದ ಹೊರಗೆ ಹೋಗುವ ನೀರಿನ ಪ್ರಮಾಣವನ್ನು ನಿಖರವಾಗಿ ಪ್ರಮಾಣೀಕರಿಸಿ ಅಷ್ಟೂ ನೀರನ್ನು ಸಂಗ್ರಹಣೆ ಮಾಡುವ ವಿನ್ಯಾಸಗಳನ್ನು ನಿರ್ಮಿಸುವುದು, ಭೂ ಸಂಪನ್ಮೂಲ ಸಮೀಕ್ಷೆಯ ಆಧಾರ ಮಾಹಿತಿಯಂತೆ ಪ್ರತಿ ರೈತನ ಜಮೀನಿಗೆ ಸೂಕ್ತ ಬೆಳೆಗಳನ್ನು ಆಯ್ಕೆ ಮಾಡುವುದು, ಭೂಮಿಯಲ್ಲಿ ಲಭ್ಯವಿರುವ ಪೋಷಕಾಂಶಗಳ ಮಟ್ಟ ಸೂಚಿಸುವ ಭೂ ಸಂಪನ್ಮೂಲ ಸಮೀಕ್ಷೆ ಕಾರ್ಡ್‌ಗಳನ್ನು ವಿತರಿಸಿ ಅವರಿಗೆ ತರಬೇತಿ ಕೊಟ್ಟು ರೈತರು ಅದರಂತೆ ಬೆಳೆಗಳ ಆಯ್ಕೆ ಮತ್ತು ಪೋಷಕಾಂಶಗಳ ನಿರ್ವಹಣೆ ಮಾಡುವಂತೆ ಪ್ರೇರೇಪಿಸುವುದು ಅಗತ್ಯ'' ಎಂದು ತಿಳಿಸಿದರು.

ವಿಶ್ವ ಬ್ಯಾಂಕ್ ಸಲಹೆಗಾರರಾದ ಜೆ.ವಿ.ಆರ್. ಮೂರ್ತಿ ಮಾತನಾಡಿ, ''ಜಲಾನಯನ ಅಭಿವೃದ್ಧಿ ಇಲಾಖೆ, ರಾಜ್ಯದ ಕೃಷಿ ವಿವಿಗಳು, ರಾಷ್ಟ್ರೀಯ ಭೂ ಸಂಪನ್ಮೂಲ ಸಮೀಕ್ಷೆ ಮತ್ತು ಭೂ ಬಳಕೆ ಸಂಸ್ಥೆ ಭಾರತೀಯ ವಿಜ್ಞಾನ ಕೇಂದ್ರ, ಕರ್ನಾಟಕ ರಾಜ್ಯ ದೂರ ಸಂವೇದನಾ ಕೇಂದ್ರ, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಕೇಂದ್ರದ ಸಹಯೋಗದೊಂದಿಗೆ ರಾಜ್ಯದ 25 ಜಿಲ್ಲೆಗಳಲ್ಲಿ ಸುಮಾರು 35 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಭೂ ಸಂಪನ್ಮೂಲ ಹಾಗೂ ಜಲವಿಜ್ಞಾನಗಳ ಅಧ್ಯಯನ ನಡೆಸಿ ಮಾಹಿತಿಯನ್ನು ಪೋರ್ಟಲ್‌ನಲ್ಲಿ ಸಂಗ್ರಹಿಸಲಾಗಿದೆ. ಜತೆಗೆ, ಜಲಾನಯನ ನಿರ್ವಹಣೆಗಾಗಿ ನಿರ್ದಿಷ್ಟಸ್ಥಳ ಚಟುವಟಿಕೆಗಳನ್ನು ಆಯ್ಕೆ ಮಾಡುವ ಡಿಜಿಟಲ್ ಪರಿಕರಗಳ ವ್ಯವಸ್ಥೆ ಮಾಡಲಾಗಿದೆ. ಈ ವ್ಯವಸ್ಥೆಯಿಂದ ಜಲಾನಯನ ಪ್ರದೇಶದ ವಿಸ್ತೃತ ಯೋಜನಾ ವರದಿಯನ್ನು ಕೇವಲ ಆರು ತಿಂಗಳಲ್ಲಿ ಪೂರ್ಣಗೊಳಿಸಬಹುದಾಗಿದೆ'' ಎಂದು ನುಡಿದರು.

ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ ಮಾತನಾಡಿ, ''ಜಲಾನಯನ ಅಭಿವೃದ್ಧಿ ಕೇವಲ ತಂತ್ರಜ್ಞಾನಕ್ಕೆ ಸೀಮಿತವಾಗದೆ ಸಮುದಾಯ ಭಾಗವಹಿಸುವಿಕೆ ಅತ್ಯವಶ್ಯಕವಾಗಿದೆ. ಇದುವರೆಗೂ 1,545 ತರಬೇತಿಗಳ ಮುಖಾಂತರ ಜಲಾನಯನ ಪ್ರದೇಶದಲ್ಲಿ ಬರುವ 7.15 ಲಕ್ಷ ರೈತರಿಗೆ ಭೂ ಸಂಪನ್ಮೂಲ ಸಮೀಕ್ಷೆ ಕಾರ್ಡ್‌ಗಳನ್ನು ವಿತರಿಸಲಾಗಿದೆ. ರೈತರು ಈ ಕಾರ್ಡ್‌ಗಳಲ್ಲಿ ಲಭ್ಯವಿರುವ ಮಾಹಿತಿಯಂತೆ ರಸಗೊಬ್ಬರಗಳ ನಿರ್ವಹಣೆಯಲ್ಲಿ ಬದಲಾವಣೆ ತರುವಲ್ಲಿ ಅನುಕೂಲವಾಗಿದೆ,'' ಎಂದರು.

ಕಾರ್ಯಕ್ರಮದಲ್ಲಿ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಅಶೋಕ್ ದಳವಾಯಿ, ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತರಾದ ಮಹೇಶ್ ಬಿ. ಶಿರೂರ್, ಹಿರಿಯ ಮಣ್ಣು ವಿಜ್ಞಾನಿ ಡಾ. ಎಸ್.ಪಿ. ರೆಡ್ಡಿ, ವಿಶೇಷ ಅಧಿಕಾರಿ ಡಾ. ಎಂ.ಬಿ. ಪ್ರಕಾಶ್ ಉಪಸ್ಥಿತರಿದ್ದರು.

VijayaKarnataka Pg.06

Vijayavani Pg.5ac

ಕೇಂದ್ರದ ಭೂ ಸಂಪನ್ಮೂಲ ಇಲಾಖೆಯ ನಿತಿನ್ ಖಾಡೆ ಹೇಳಿಕೆ | ಜಿಕೆವಿಕೆಯಲ್ಲಿ ರಾಷ್ಟ್ರೀಯ ಸಮ್ಮೇಳನ

ಜಲಾನಯನ ಪ್ರದೇಶ ನಿರ್ವಹಣೆಗೆ ಎಲ್‌ಆರ್‌ಐ ಸಹಕಾರಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬಂಜರು ಜಮೀನನ್ನು ಕೃಷಿಯೋಗ್ಯ ಜಮೀನನ್ನಾಗಿ ಮಾರ್ಪಡಿಸಲು ಹಾಗೂ ಜಲಾನಯನ ಪ್ರದೇಶ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಭೂ ಸಂಪನ್ಮೂಲ ಸಮೀಕ್ಷೆ (ಎಲ್‌ಆರ್‌ಐ) ತುಂಬ ಉಪಯುಕ್ತವಾಗಲಿದೆ ಎಂದು ಕೇಂದ್ರದ ಭೂ ಸಂಪನ್ಮೂಲ ಇಲಾಖೆ ಜಂಟಿ ಕಾರ್ಯದರ್ಶಿ ನಿತಿನ್ ಖಾಡೆ ತಿಳಿಸಿದ್ದಾರೆ.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕ್ಯಾಂಪಸ್ ಜಿಕೆವಿಕೆಯಲ್ಲಿ ವಿವಿ ಜಲಾನಯನ ನಿರ್ವಹಣೆಯ ಉತ್ಕೃಷ್ಟತಾ ಕೇಂದ್ರವು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಹಯೋಗದಲ್ಲಿ ಆಯೋಜಿಸಿರುವ 'ಭೂ ಸಂಪನ್ಮೂಲ ಸಮೀಕ್ಷೆ ಆಧಾರಿತ ಸುಸ್ಥಿರ ಜಲಾನಯನ ನಿರ್ವಹಣೆ ಕುರಿತ ರಾಷ್ಟ್ರೀಯ ಸಮ್ಮೇಳನಕ್ಕೆ ಮಂಗಳವಾರ ಚಾಲನೆ ನೀಡಿ ಮಾತನಾಡಿದರು.

ಜಲಾನಯನ ಪ್ರದೇಶದ ಸರ್ವೇ ಸಂಖ್ಯೆವಾರು ನಿರ್ದಿಷ್ಟ ಸಮಸ್ಯೆ ಹಾಗೂ ಅವುಗಳ ಕಾರಣವನ್ನು ಎಲ್‌ಆರ್‌ಐ ಮತ್ತು ಜಲವಿಜ್ಞಾನ ಅಧ್ಯಯನದಿಂದ ತಿಳಿಯಬಹುದಾಗಿದೆ. ಜಲಾನಯನ ಪ್ರದೇಶದಿಂದ ಹೊರಹೋಗುವ ನೀರಿನ ಪ್ರಮಾಣವನ್ನು ನಿಖರವಾಗಿ ಗುರುತಿಸಿ ಅಷ್ಟೂ ಜಲವನ್ನು ಸಂಗ್ರಹಿಸುವ ವಿನ್ಯಾಸಗೊಳಿಸಬಹುದಾಗಿದೆ. ಜತೆಗೆ ಈ ಸಮೀಕ್ಷೆಯ ಮಾಹಿತಿಯಂತೆ ರೈತರ ಜಮೀನಿಗೆ .ಸೂಕ್ತ ಬೆಳೆ ಆಯ್ಕೆ ಹಾಗೂ ಪೋಷಕಾಂಶ ನಿರ್ವಹಣೆಗೆ ಪ್ರೇರೇಪಿಸಬಹುದು ಎಂದರು.

ದೇಶದಲ್ಲಿ ವಿಶ್ವಬ್ಯಾಂಕ್ ಸಹಕಾರದಲ್ಲಿ ಜಲಾನಯನ ಅಭಿವೃದ್ಧಿ ಯೋಜನೆಯನ್ನು ಕರ್ನಾಟಕ ಹಾಗೂ ಒಡಿಶಾ ರಾಜ್ಯದಲ್ಲಿ ಮಾತ್ರ ಜಾರಿಗೊಳಿಸಲಾಗುತ್ತಿದೆ. ಈ ಪೈಕಿ ಕರ್ನಾಟಕವು ಉತ್ತಮ ನಿರ್ವಹಣೆ ಮಾಡಿದ್ದು, ಇತರ ರಾಜ್ಯಗಳಿಗೆ ಮಾದರಿಯಾಗಿದೆ ಎಂದು ನಿತಿನ್ ಖಾಡೆ ಶ್ಲಾಘಿಸಿದರು.

ಇಲಾಖಾ ಯೋಜನೆ ರೂಪಿಸಲು ಅನುಕೂಲ: ವಿಶ್ವಬ್ಯಾಂಕ್ ಕನ್ಸಲ್ಟೆಂಟ್ ಜೆ.ವಿ.ಆರ್. ಮೂರ್ತಿ ಮಾತನಾಡಿ, ರಾಷ್ಟ್ರೀಯ ಭೂ ಸಂಪನ್ಮೂಲ ಸಮೀಕ್ಷೆ ಮತ್ತು ಭೂಬಳಕೆ ಸಂಸ್ಥೆಯು ಕರ್ನಾಟಕದ ವಿವಿಧ ಇಲಾಖೆಗಳ ಸಹಯೋಗದಲ್ಲಿ 25 ಜಿಲ್ಲೆಗಳ 35 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭೂ ಸಂಪನ್ಮೂಲ ಮತ್ತು ಜಲವಿಜ್ಞಾನ ಅಧ್ಯಯನ ಕೈಗೊಂಡಿದೆ. ಈ ಮಾಹಿತಿಯನ್ನು ಶೇಖರಣೆ ಮಾಡಲಾಗಿದೆ. ಈ ವ್ಯವಸ್ಥೆಯಿಂದ ಜಲಾನಯನ ಪ್ರದೇಶದ ವಿಸ್ತೃತ ಯೋಜನಾ ವರದಿ (ಡಿಪಿಆರ್)ಯನ್ನು 6 ತಿಂಗಳಲ್ಲಿ ಪೂರ್ಣಗೊಳಿಸಲು ಸಾಧ್ಯವಿದ್ದು, ಆಯಾ ಇಲಾಖೆಗಳ ಯೋಜನೆಗಳನ್ನು ರೂಪಿಸಲು ಅನುಕೂಲವಾಗಲಿದೆ ಎಂದು ತಿಳಿಸಿದರು.



ಬೆಂಗಳೂರು ಕೃಷಿ ವಿವಿಯಲ್ಲಿ ವಿವಿ ಮಂಗಳವಾರ ಆಯೋಜಿಸಿದ್ದ 'ಭೂ ಸಂಪನ್ಮೂಲ ಸಮೀಕ್ಷೆ ಆಧಾರಿತ ಸುಸ್ಥಿರ ಜಲಾನಯನ ನಿರ್ವಹಣೆ ಕುರಿತ ರಾಷ್ಟ್ರೀಯ ಸಮ್ಮೇಳನವನ್ನು ಕೇಂದ್ರದ ಭೂ ಸಂಪನ್ಮೂಲ ಇಲಾಖೆಯ ಜಂಟಿ ನಿರ್ದೇಶಕ ನಿತಿನ್ ಖಾಡೆ ಉದ್ಘಾಟಿಸಿದರು. ಕೃಷಿ ವಿವಿ ಕುಲಪತಿ ಡಾ. ಎಸ್.ವಿ.ಸುರೇಶ್, ಜಲಾನಯನ ಅಭಿವೃದ್ಧಿ ಇಲಾಖಾ ಆಯುಕ್ತ ಮಹೇಶ್ ಶಿರೂರ್, ಎಂ.ಪಿ.ಬಂತನಾಳ, ಡಾ. ಎನ್.ಬಿ.ಪ್ರಕಾಶ್ ಇದ್ದರು.

ದೇಶದಲ್ಲಿ 1/3 ಭಾಗ ಒಣ ಜಮೀನು ಪ್ರದೇಶವಿದೆ. ಹೆಚ್ಚಿನ ರೈತರು ಕಡಿಮೆ ಹಿಡುವಳಿ ಹೊಂದಿದ್ದು, ನೀರಿನ ಕೊರತೆ ಜತೆಗೆ ಆತಿಯಾದ ರಸಗೊಬ್ಬರ ಬಳಸಲಾಗುತ್ತಿದೆ. ಈ ಸಮಸ್ಯೆ ಪರಿಹರಿಸಲು ಸುಜಲಾ ಯೋಜನೆ ಜಾರಿ ಮಾಡಿ ಯಶಸ್ವಿಯಾಗಲು ವಿಶ್ವಬ್ಯಾಂಕ್ ಸಹಕಾರ ನೀಡಿದೆ. ಕರ್ನಾಟಕದಲ್ಲಿ ಸಫಲವಾಗಿರುವ ಯೋಜನೆ ಮಾದರಿಯನ್ನು ಇತರ ರಾಜ್ಯಗಳಿಗೆ ತಿಳಿಸುವ ಹೊಣೆ ನಾವು ಹೊರಬೇಕಿದೆ.

| ಡಾ. ಎಸ್.ವಿ. ಸುರೇಶ್
ಬೆಂಗಳೂರು ಕೃಷಿ ವಿವಿ ಕುಲಪತಿ

3 ದಿನವೂ ತಾಂತ್ರಿಕ ಗೋಷ್ಠಿ

ಉದ್ಘಾಟನಾ ಕಾರ್ಯಕ್ರಮದ ಬಳಿಕ ದೇಶದ ವಿವಿಧ ರಾಜ್ಯಗಳಿಂದ ಆಗಮಿಸಿರುವ ವಿಜ್ಞಾನಿಗಳು ಹಾಗೂ ಹಿರಿಯ ಅಧಿಕಾರಿಗಳ ತಾಂತ್ರಿಕ ಗೋಷ್ಠಿ ನಡೆಯಿತು. ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಅಶೋಕ್ ದಳವಾಯಿ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು. ಸಮ್ಮೇಳದ ಉಳಿದೆರಡು ದಿನವೂ ತಲಾ 3 ಗೋಷ್ಠಿಗಳು ಆಯೋಜನೆ ಆಗಿವೆ. ಕಾರ್ಯಕ್ರಮದಲ್ಲಿ ರಾಜ್ಯ ಜಲಾನಯನ ಅಭಿವೃದ್ಧಿ ಇಲಾಖಾ ಆಯುಕ್ತ ಮಹೇಶ್ ಶಿರೂರ್, ನಿರ್ದೇಶಕ ಎಂ.ಪಿ. ಬಂತನಾಳ, ಉತ್ಕೃಷ್ಟತಾ ಕೇಂದ್ರದ ವಿಶೇಷಾಧಿಕಾರಿ ಡಾ. ಎನ್.ಬಿ. ಪ್ರಕಾಶ್ ಹಾಜರಿದ್ದರು.

ಬಿತ್ತನೆಗೂ ಮುನ್ನವೇ ಎಂಎಸ್‌ಪಿ ನೋಂದಣಿ!

ಕಾರ್ಪೊರೇಟ್ ವ್ಯವಸ್ಥೆ ಅಳವಡಿಸಿಕೊಂಡ ಕೇಂದ್ರ ಸರಕಾರ | ಬೇಳೆಕಾಳು ಆಮದು ತಗ್ಗಿಸುವ ಗುರಿ

ಹೊಸದಿಲ್ಲಿ: ಬೇಳೆಕಾಳುಗಳ ಉತ್ಪಾದನೆ ಹೆಚ್ಚಿಸಿ ಆಮದು ತಗ್ಗಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಮಹತ್ವದ ಹೆಜ್ಜೆ ಇರಿಸಿದೆ. ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಮೂಲಕ ಗರಿಷ್ಠ ಪ್ರಮಾಣದಲ್ಲಿ ಬೇಳೆಕಾಳುಗಳನ್ನು ಖರೀದಿಸುವುದು ಸರಕಾರದ ಗುರಿ. ಅದಕ್ಕಾಗಿ ಕಾರ್ಪೊರೇಟ್ ಸಂಸ್ಥೆಗಳ ಮಾದರಿಯಲ್ಲಿಯೇ ರೈತರು ಎಂಎಸ್‌ಪಿ ಯೋಜನೆಯ ಲಾಭ ಪಡೆಯಲು ಮುಂಚಿತವಾಗಿಯೇ ಹೆಸರು ನೋಂದಾಯಿಸಿಕೊಳ್ಳುವ ಸೌಲಭ್ಯವನ್ನು ಪರಿಚಯಿಸಲು ಮುಂದಾಗಿದೆ.

ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಒಕ್ಕೂಟ (ನಾಫೆಡ್) ಮತ್ತು ರಾಷ್ಟ್ರೀಯ ಸಹಕಾರಿ ಗ್ರಾಹಕರ ಒಕ್ಕೂಟದ (ಎನ್‌ಸಿಸಿಎಫ್) ಮೂಲಕ ರೈತರ ನೋಂದಣಿ ನಡೆಯಲಿದೆ. ಇ- ಸಮೃದ್ಧಿ ಮತ್ತು ಇ-ಸಂಯುಕ್ತಿ ಪೋರ್ಟಲ್‌ಗಳ ಮೂಲಕ ನೋಂದಣಿ ಮಾಡಿಕೊಳ್ಳಲಾಗುತ್ತಿದ್ದು, ಈ ವರ್ಷದ ಮುಂಗಾರು ಹಂಗಾಮಿನಲ್ಲಿ ಇದುವರೆಗೆ 64 ಲಕ್ಷ ರೈತರು ನೋಂದಣಿ ಮಾಡಿಕೊಂಡಿದ್ದಾರೆ. ಈ ರೈತರಿಂದ ಸಂಪೂರ್ಣವಾಗಿ ಬೇಳೆಕಾಳು ಖರೀದಿಸುವ ಜತೆಗೆ, ಬೇಸಾಯದ ಸಂದರ್ಭದಲ್ಲಿ ಅಗತ್ಯ ಮಾಹಿತಿ, ತಾಂತ್ರಿಕತೆಯ ನೆರವು ನೀಡುವುದಾಗಿ ಕೇಂದ್ರ ಕೃಷಿ ಸಚಿವಾಲಯ ತಿಳಿಸಿದೆ.

ಪ್ರಮುಖವಾಗಿ ಹೆಚ್ಚಿನ ಪ್ರಮಾಣದಲ್ಲಿ ತೊಗರಿ, ಚಿನ್ನಂಗಿ ಬೇಳೆ, ಉದ್ದು ಬೆಳೆಯುವ ಉತ್ತರ ಪ್ರದೇಶ, ಜಾರ್ಖಂಡ್ ಮತ್ತು ಬಿಹಾರಗಳ ರೈತರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಮಾಡಿಸಲು ನಾಫೆಡ್, ಎನ್‌ಸಿಸಿಎಫ್ ಶ್ರಮಿಸುತ್ತಿವೆ. ಅಲ್ಲದೆ ಎಥೆನಾಲ್ ಉತ್ಪಾದನೆ ಹೆಚ್ಚಿಸಲು ಕರ್ನಾಟಕವೂ ಸೇರಿದಂತೆ ಮೆಕ್ಕೆಜೋಳ ಬೆಳೆಯುವ 29 ರಾಜ್ಯಗಳಲ್ಲಿ ರೈತರ ನೋಂದಣಿಗೂ ಕ್ರಮ ಕೈಗೊಳ್ಳಲಾಗಿದ್ದು, ಈವರೆಗೆ 13 ಲಕ್ಷ ರೈತರು ಹೆಸರು ನೋಂದಾಯಿಸಿಕೊಂಡಿದ್ದಾರೆ.

ಮಿತಿ ತೆರವು: ಬೆಲೆ ಬೆಂಬಲ ಯೋಜನೆ (ಪಿಎಸ್‌ಎಸ್) ಅಡಿಯಲ್ಲಿ ಶೇ.100ರಷ್ಟು ದ್ವಿದಳ ಧಾನ್ಯಗಳನ್ನು ಎಂಎಸ್‌ಪಿಯಲ್ಲಿ ಖರೀದಿಸುವುದಾಗಿ ಕೃಷಿ ಸಚಿವಾಲಯ ಭರವಸೆ ನೀಡಿದೆ. ಪಿಎಸ್‌ಎಸ್ ಅಡಿಯಲ್ಲಿ ತೊಗರಿ, ಉದ್ದು ಮತ್ತು ಚಿನ್ನಂಗಿ ಬೇಳೆ ಖರೀದಿಗೆ ಪ್ರಸ್ತುತ ಇರುವ ಶೇ.25ರಷ್ಟು ಖರೀದಿ ಮಿತಿಯನ್ನು ತೆಗೆದುಹಾಕಲಾಗಿದೆ.

"ಮಾರುಕಟ್ಟೆ ಧಾರಣೆ ಎಂಎಸ್‌ಪಿಗಿಂತಲೂ ಹೆಚ್ಚಿದ್ದರೆ ರೈತರು ಖಾಸಗಿಯವರಿಗೆ ಮಾರಾಟ ಮಾಡಬಹುದು. ಸರಕಾರಿ ಖರೀದಿ ವ್ಯಾಪ್ತಿ ಮತ್ತು ಪ್ರಮಾಣವನ್ನು ಹೆಚ್ಚಿಸಲು ನಾವು ಪೋರ್ಟಲ್‌ನಲ್ಲಿ ಸ್ಥಳದಲ್ಲೇ ನೋಂದಣಿ ಮಾಡಿಸುತ್ತಿದ್ದೇವೆ," ಎಂದು ಎನ್‌ಸಿಸಿಎಫ್ ವ್ಯವಸ್ಥಾಪಕ ನಿರ್ದೇಶಕ ಅನೀಸ್ ಜೋಸೆಫ್ ಚಂದ್ರ ಹೇಳಿದ್ದಾರೆ.

ತೊಗರಿ ಖರೀದಿ ದಾಖಲೆ: ಇಲ್ಲಿಯವರೆಗೆ ನಾಫೆಡ್ ಮತ್ತು ಎನ್‌ಸಿಸಿಎಫ್ ಪ್ರಸಕ್ತ 2024-25 ಋತುವಿನಲ್ಲಿ ಮಹಾರಾಷ್ಟ್ರ, ಕರ್ನಾಟಕ, ಗುಜರಾತ್ ಮತ್ತು ಆಂಧ್ರಪ್ರದೇಶದ ರೈತರಿಂದ ಕ್ರಮವಾಗಿ 3.60 ಲಕ್ಷ ಟನ್ ಮತ್ತು 1.16 ಲಕ್ಷ ಟನ್ ತೊಗರಿಯನ್ನು ಎಂಎಸ್‌ಪಿಯಲ್ಲಿ ಖರೀದಿಸಿವೆ. ಇದು 2019-20ರ ನಂತರದ ಅತಿ ಹೆಚ್ಚು ತೊಗರಿ ಖರೀದಿಯಾಗಿದೆ.



12%-15%

ಕಳೆದ ಐದು ವರ್ಷಗಳಲ್ಲಿ ಭಾರತವು ಇಷ್ಟು ಪ್ರಮಾಣದ ಬೇಳೆಕಾಳುಗಳನ್ನು ಆಮದು ಮಾಡಿಕೊಂಡಿದೆ. ಕೆನಡಾ, ರಷ್ಯಾ, ಆಸ್ಟ್ರೇಲಿಯಾ, ಮ್ಯಾನ್ಮಾರ್, ತಾಂಜೇನಿಯಾ, ಮೊಜಾಂಬಿಕ್ ಪ್ರಮುಖ ರಫ್ತುದಾರ ರಾಷ್ಟ್ರಗಳು.

ಸಂಗ್ರಹಣೆಗೆ ಹೊಸ ವಿಧಾನ

ಕೃಷಿ ಸಚಿವಾಲಯವು 2025-26ರ ಮುಂಗಾರು ಹಂಗಾಮಿನಿಂದ ಬೇಳೆಕಾಳುಗಳು ಮತ್ತು ಎಣ್ಣೆಕಾಳುಗಳ ಎಂಎಸ್‌ಪಿ ಸಂಗ್ರಹಣೆಗೆ ಮುಖ ದೃಢೀಕರಣ ಮತ್ತು ಪಾಯಿಂಟ್ ಆಫ್ ಸೇಲ್ (ಪಿಒಎಸ್) ಯಂತ್ರಗಳ ಬಳಕೆಯನ್ನು ಕಡ್ಡಾಯಗೊಳಿಸಿದೆ. ನಿಜವಾದ ರೈತರು ಮಾತ್ರ ವಿವಿಧ ಯೋಜನೆಗಳ ಅಡಿಯಲ್ಲಿ ಖರೀದಿ ಲಾಭ ಪಡೆಯಬೇಕು ಎಂಬುದನ್ನು ದೃಢಪಡಿಸಲು ಈ ರೀತಿ ಮಾಡಲಾಗಿದೆ. ನಾಫೆಡ್ ಮತ್ತು ಎನ್‌ಸಿಸಿಎಫ್‌ಗೆ ಬರೆದ ಪತ್ರದಲ್ಲಿ, ಕೃಷಿ ಸಚಿವಾಲಯವು ರೈತರ ನೋಂದಣಿಗೆ ಬಳಸುವ ತಮ್ಮ ಪೋರ್ಟಲ್ ಅನ್ನು ಸಚಿವಾಲಯದ ಸಮಗ್ರ ಕೃಷಿ ಅಂಕಿಅಂಶಗಳ ಪೋರ್ಟಲ್ (ಯುಪಿಎಜಿ)ನೊಂದಿಗೆ ಸಂಯೋಜಿಸಲು ಮತ್ತು ತೈಲ ಬೀಜಗಳು ಮತ್ತು ಬೇಳೆಕಾಳುಗಳ ಖರೀದಿಯನ್ನು ನೈಜ ಸಮಯದ ಆಧಾರದ ಮೇಲೆ ಅಪ್ಲೋಡ್ ಮಾಡಲು ಹೇಳಿದೆ.

- **ಯಾವೆಲ್ಲ ಬೆಳೆಗಳಿಗೆ ಲಭ್ಯ?** ತೊಗರಿ, ಚಿನ್ನಂಗಿ ಬೇಳೆ, ಉದ್ದು
- **ರೈತರಿಗೆ ಅನುಕೂಲವೇನು?** ಕನಿಷ್ಠ ಬೆಂಬಲ ಬೆಲೆ ಖಾತ್ರಿ . ಜತೆಗೆ, ಬಿತ್ತನೆಯಿಂದ ಕಟಾವಿನವರೆಗೆ ಸರಕಾರದಿಂದ ಅಗತ್ಯ ತಾಂತ್ರಿಕ ನೆರವು.
- **ಕೇಂದ್ರ ಸರಕಾರದ ಉದ್ದೇಶವೇನು?** ಬೇಳೆಕಾಳುಗಳ ಆಮದು ತಗ್ಗಿಸುವುದು ಮತ್ತು ಎಥೆನಾಲ್ ಉತ್ಪಾದನೆ ಹೆಚ್ಚಿಸುವುದು
- **ಮುಕ್ತ ಮಾರುಕಟ್ಟೆಗೂ ಮಾರಬಹುದೆ?** ಎಂಎಸ್‌ಪಿಗಿಂತ ಮುಕ್ತ ಮಾರುಕಟ್ಟೆಯಲ್ಲಿ ಅಧಿಕ ಧಾರಣೆ ಇದ್ದರೆ ಅಲ್ಲಿಯೂ ಮಾರಾಟ ಮಾಡಬಹುದು.

VijayaKarnataka Pg.4spl

IndianExpress Pg.04

MATTER OF CONCERN

After US import ban, areca leaf plate makers in doldrums

RAMACHANDRA V GUNARI
@ Shivamogga

THE areca leaf plate manufacturing industry has been severely hit by the US government's decision to ban import of the leaf plates. The US announced its decision and stopped importing the plates from May 8, citing the reason that a form of alkaloid in the areca plates makes them carcinogenic.

Apprehension is mounting among areca leaf plate manufacturers as well as thousands of labourers working in these industries.

Areca leaf plate manufacturing is one of the main businesses of Shivamogga district, considered the largest areca producer in the state. Leaf plate manufacturing is a secondary economic generator for areca growers, especially marginal farmers of Thirthahalli and Hosanagar taluks.



Shivamogga District Industries Association secretary Visveshwaraiah told *TNIE* there are more than 500 areca leaf plate manufacturing units in the district, that have employed 8,000 to 10,000 labourers. The tableware made from areca leaves was a great opportunity for areca growers, industrialists and thousands of labourers who have earned their livelihood through it for the past two decades, he said.

For traditional areca growers who own a minimum land area of half an acre to two acres, the plate manufacturing units presented a good opportunity of a secondary income, as they bought the leaves from them for a tidy sum, said Visveshwaraiah.

The hundreds of areca leaf plate manufacturing units are a big source of employment for unemployed men and women in rural areas, where most of these units operate. "Semi-skilled labourers get a salary of Rs 6,000 while experienced and skilled labourers get a maximum of Rs 15,000 per month, which is the average package offered by these units, sources said.

> **The food certification authorities of the US informed that the plates contain a kind of alkaloid which is carcinogenic in nature, which led to the ban**
>
> Manjunath, SDALMA representative

This industry is also supportive of industries like dye making and fabrication in the district, said Visveshwaraiah.

Recently, office-bearers of the Shivamogga District Areca Leaf Manufacturing Association (SDALMA) urged the State and Central governments to intervene and talk to the US authorities to lift the ban on the import of areca leaf plates.

"The food certification authorities of the US informed that the plates contain a kind of alkaloid which is carcinogenic in nature, which led to the ban. But this is not quite true as these leaf plates have been used for many centuries in India," said Manjunath, of the SDALMA.

Another reason for apprehension among the manufacturers and labourers is that if European countries decide to follow the US and impose a ban, their business will be in great trouble. At least 17 countries import these leaf plates, so they are now looking to the Central and state governments to intervene, and hoping that the import ban will be lifted by the US.

ಗ್ಯಾರಂಟಿ ಅನುಷ್ಠಾನ ಸಮಿತಿಗೆ ಮುಂಗಡ ಭತ್ಯೆ: ಜೋಶಿ ಕಿಡಿ

ಕಾಂಗ್ರೆಸ್ ಕಾರ್ಯಕರ್ತರ ಪೋಷಣೆಗೆ ಆಕ್ಷೇಪ

ನವದೆಹಲಿ: ರಾಜ್ಯ ಕಾಂಗ್ರೆಸ್ ಸರ್ಕಾರ, ಗ್ಯಾರಂಟಿ ನೆಪದಲ್ಲಿ ತನ್ನ ಕಾರ್ಯಕರ್ತರನ್ನು ಸಲಹುತ್ತಿದೆ ಎಂದು ಕೇಂದ್ರ ಆಹಾರ ಮತ್ತು ನಾಗರೀಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಕಿಡಿ ಕಾರಿದ್ದಾರೆ.



ಗ್ಯಾರಂಟಿಗಳ ಭರವಸೆ ನೀಡಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕಳೆದ ಮೂರು ತಿಂಗಳಿಂದಲೂ ಮಹಿಳೆಯರಿಗೆ ಗೃಹಲಕ್ಷ್ಮಿ ಹಣ ನೀಡಿಲ್ಲ. ಆದರೆ, ಗ್ಯಾರಂಟಿ ಅನುಷ್ಠಾನ ಸಮಿತಿಗೆ ಮಾತ್ರ 3 ತಿಂಗಳ ಮುಂಗಡ ಭತ್ಯೆ ಬಿಡುಗಡೆಗೆ ಆದೇಶಿಸಿದೆ ಎಂದು ಆರೋಪಿಸಿದ್ದಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಸ್ಕೀಂಗಳು ಆ ಪಕ್ಷದ ಕಾರ್ಯಕರ್ತರಿಗೆ ಆದಾಯದ ಮೂಲವಾಗಿವೆ. ಗೃಹಲಕ್ಷ್ಮಿ ನಿಜಕ್ಕೂ ಆ ಪಕ್ಷದವರಿಗೆ ವರದಾನವಾಗಿದೆ, ವರಮಾನ ತರುವ ಯೋಜನೆಯಾಗಿದೆ ಎಂದಿದ್ದಾರೆ.

ಕಾಂಗ್ರೆಸ್ ನಾಯಕರು ಅಧಿಕಾರಕ್ಕೆ ಬರುವ ಮುನ್ನ ಮಹಿಳೆಯರಿಗೆ ಪ್ರತಿ ತಿಂಗಳು 2,000 ರೂ. ಟಕಾಟಕ್ ಹಾಕೇಬಿಡ್ತೀವಿ ಎಂದರು. ಆದರೆ, ಮೂರ್ನಾಲ್ಕು ತಿಂಗಳುಗಟ್ಟಲೇ ಹಾಕದೆ ಸತಾಯಿಸುತ್ತಿದೆ.

ಪ್ರಶ್ನಿಸಿದರೆ ಅದೇನು ಸಂಬಳವೇ ಎನ್ನುತ್ತಾರೆ. ಹಾಗಾದರೆ ಗ್ಯಾರಂಟಿ ಅನುಷ್ಠಾನ ಸಮಿತಿಗೆ ಕೊಡುತ್ತಿರುವುದೇನು? ಎಂದು ಅವರು ಪ್ರಶ್ನಿಸಿದ್ದಾರೆ.

ಮಹಿಳೆಯರಿಗೆ ಪ್ರತಿ ತಿಂಗಳು ಕೊಡಲು ಹಣವಿಲ್ಲ. ಆದರೆ, ಗ್ಯಾರಂಟಿ ಅನುಷ್ಠಾನ ಸಮಿತಿಗೆ ಒಟ್ಟಿಗೇ 5 ತಿಂಗಳು (3 ತಿಂಗಳು ಮುಂಗಡ) ಭತ್ಯೆಯಾಗಿ 7.65 ಕೋಟಿ ಬಿಡುಗಡೆ ಮಾಡಿದೆ. ರಾಜ್ಯದ ಜನರಿಗೆ ಮಾತ್ರ ಆಗಸ ತೋರಿಸಿ ಮಂಕುಬೂದಿ ಎರಚುತ್ತಿದೆ ಎಂದು ಆರೋಪಿಸಿದ್ದಾರೆ.ಸಚಿವ ಸತೀಶ್ ಜಾರಕಿಹೊಳಿ ಪ್ರತಿ ತಿಂಗಳು ಗೃಹಲಕ್ಷ್ಮಿ ಹಣ ಕೊಡದಿದ್ರೆ ಆಕಾಶ ಏನೂ ಕಳಚಿ ಬೀಳಲ್ಲ ಎಂಬ ದುರಹಂಕಾರದ ಮಾತನಾಡುತ್ತಿದ್ದಾರೆ. ಮತ್ತೆ ಕೆಲವರು ಅದೇನು ಸಂಬಳವೇ? ಎಂದು ಪ್ರತಿಕ್ರಿಯಿಸಿದರು. ಹಾಗಾದರೆ ಗ್ಯಾರಂಟಿ ಸಮಿತಿಯಲ್ಲಿರುವ ಕಾಂಗ್ರೆಸ್ ಮುಖಂಡರಿಗೆ, ಕಾರ್ಯಕರ್ತರಿಗೆ ಮುಂಗಡ ಭತ್ಯೆಗೆ ಆದೇಶ ಕೊಟ್ಟಿದ್ದಾರಲ್ಲ ಇದೇನು? ಎಂದು ಜೋಶಿ ಪ್ರಶ್ನಿಸಿದ್ದಾರೆ.

ರಾಜ್ಯದ 1.25 ಕೋಟಿ ಮಹಿಳೆಯರಿಗೆ ಕಳೆದ ಮೂರು ತಿಂಗಳಿಂದ ಗೃಹಲಕ್ಷ್ಮಿ ಹಣ ಸಂದಾಯವಾಗಿಲ್ಲ. ಅಂದಾಜು 7200 ಕೋಟಿ ಹಣ ಬಿಡುಗಡೆ ಬಾಕಿ ಉಳಿಸಿಕೊಂಡಿದೆ. ಖಜಾನೆ ಪೂರ್ತಿ ಖಾಲಿ ಮಾಡಿದೆ ಎಂದು ಟೀಕಿಸಿದ್ದಾರೆ.

ಬುಲಾಬ್ ಬಂದರೆ ಹೈಕಮಾಂಡ್ ಭೇಟಿ

ಬೆಂಗಳೂರು: ಕೇಂದ್ರ ಸಚಿವಾಲಯಗಳು ಅಲ್ಲಿರುವ ಕಾರಣ ದೆಹಲಿಗೆ ತೆರಳಬೇಕಾಗುತ್ತದೆ. ಸದ್ಯಕ್ಕೆ ದೆಹಲಿಯಲ್ಲಿ ಯಾವುದೇ ಕಾರ್ಯಕ್ರಮ ಇಲ್ಲ. ಸಿಎಂ ಅವರ ಕಾರ್ಯಕ್ರಮ ಇರಬಹುದು. ಹೈಕಮಾಂಡ್ ನನಗೆ ಭೇಟಿ ಮಾಡಲು ತಿಳಿಸಿದರೆ ನಾನು ಹೋಗುತ್ತೇನೆ. ಕೆಲವು ಕೇಂದ್ರ ಸಚಿವರನ್ನು ಭೇಟಿ ಮಾಡಬೇಕಿದ್ದು, ಅವರ ಸಮಯ ನಿಗದಿ ಮಾಡಿದ ನಂತರ ದೆಹಲಿ ಪ್ರಯಾಣ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರಕ್ಕೆ 2 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಸಚಿವ ಸಂಪುಟ ವಿಸ್ತರಣೆ ಆಗಲಿದೆ ಎಂಬ ಪ್ರಶ್ನೆಗೆ ಈ ವಿಚಾರ ಏನಿದ್ದರೂ ಹೈಕಮಾಂಡ್ ಹಾಗೂ ಮುಖ್ಯಮಂತ್ರಿಗಳನ್ನೇ ಕೇಳಬೇಕು ಎಂದರು. ನಿಗಮ ಮಂಡಳಿ ನೇಮಕ ಬಗ್ಗೆ ಪ್ರತಿಕ್ರಿಯಿಸಿ, ಅದನ್ನು ಶೀಘ್ರದಲ್ಲೇ ಮಾಡುತ್ತೇವೆ. ಈಗಾಗಲೇ ಗ್ಯಾರಂಟಿ ಸಮಿತಿಯಲ್ಲಿ 4 ಸಾವಿರ ಕಾರ್ಯಕರ್ತರಿಗೆ ಅಧಿಕಾರ ನೀಡಿದ್ದೇವೆ. 8 ಸಾವಿರ ಜನ ಕಾರ್ಯಕರ್ತರನ್ನು ಬೇರೆ ಬೇರೆ ಸಮಿತಿ ಸದಸ್ಯರನ್ನಾಗಿ ಮಾಡಿದ್ದೇವೆ. ರಾಜ್ಯ ಮಟ್ಟದಲ್ಲಿ 500-600 ಜನಕ್ಕೆ ಮಾಡಬೇಕಿದೆ. ಈ ಪಟ್ಟಿ ಸಿದ್ಧವಾಗಿದ್ದು, ಸ್ಥಳೀಯ ನಾಯಕರ ಜತೆ ಚರ್ಚೆ ಸಿ ಪ್ರಕಟಿಸುತ್ತೇವೆ ಎಂದು ತಿಳಿಸಿದರು. - ಪರಿಷತ್ ನಾಮನಿರ್ದೇಶನ ಸದಸ್ಯರ ನೇಮಕ ಬಗ್ಗೆ ಕೇಳಿದ ಪ್ರಶ್ನೆಗೆ ಇದನ್ನು ಹೈಕಮಾಂಡ್ ಮಾಡಲಿದೆ ಎಂದು ಚುಟುಕಾಗಿ ಉತ್ತರಿಸಿದರು.

ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಳ: ಪ್ರಧಾನಿ ಭೇಟಿಗೆ ಸಮಯ ಕೇಳ್ತೇವೆ

ಸಂ. ಕ. ಸಮಾಚಾರ, ಬೆಂಗಳೂರು

ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಳದ ಬಗ್ಗೆ ಮಹಾರಾಷ್ಟ್ರ ಸಿಎಂ ಪತ್ರಕ್ಕೆ, ನಮ್ಮ ಮುಖ್ಯಮಂತ್ರಿಗಳು ಪತ್ರ ಬರೆದ ನಂತರ, ಈ ಬಗ್ಗೆ ಚರ್ಚಿಸಲು ಪ್ರಧಾನಮಂತ್ರಿ ಹಾಗೂ ಕೇಂದ್ರ ಜಲಶಕ್ತಿ ಸಚಿವರ ಭೇಟಿಗೆ ಸಮಯ ಕೇಳಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.



ಸುಮನಹಳ್ಳಿ ಮಾಗಡಿ ರಸ್ತೆಯಲ್ಲಿರುವ ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರದ ಜಮೀನು ಹಾಗೂ ಇದೇ 27 ರಂದು ಕೆಂಪೇಗೌಡ ಜಯಂತಿ ಕಾರ್ಯಕ್ರಮ ನಡೆಸಲು ಉದ್ದೇಶಿಸಿರುವ ಡಾ. ಬಾಬು ಜಗಜೀವನ್ ರಾಮ್ ಸಂಶೋಧನಾ ಸಂಸ್ಥೆಯ ಸಭಾಂಗಣವನ್ನು ಮಂಗಳವಾರ ವೀಕ್ಷಿಸಿದ ಬಳಿಕ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಳ ಬಗ್ಗೆ ಮಹಾರಾಷ್ಟ್ರ ಸಿಎಂ ಪತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎರಡು ದಿನಗಳಲ್ಲಿ ಅವರಿಗೆ ಪತ್ರ ಬರೆಯಲಿದ್ದಾರೆ. ನನ್ನ ಅಭಿಪ್ರಾಯವನ್ನು ಈಗಾಗಲೇ ಕಳುಹಿಸಿಕೊಟ್ಟಿದ್ದೇನೆ. ಸಿಎಂ ಪತ್ರವನ್ನು ಎಲ್ಲಾ ಸಂಸದರಿಗೆ ಕಳುಹಿಸಿಕೊಡುತ್ತೇನೆ. ನಂತರ ಪ್ರಧಾನಮಂತ್ರಿ ಹಾಗೂ ಕೇಂದ್ರ ಜಲಶಕ್ತಿ ಸಚಿವರ ಭೇಟಿಗೆ ದಿನಾಂಕ ಕೇಳುತ್ತೇವೆ ಎಂದರು.

ಮಹಾರಾಷ್ಟ್ರ ಸಿಎಂ ಫಡ್ನವೀಸ್ ಅವರು ಬುದ್ಧಿವಂತರಿದ್ದಾರೆ. ಈ ಹಿಂದೆ ಅವರೇ ಈ ಯೋಜನೆಗೆ ಬೆಂಬಲ ನೀಡಿದ್ದರು. ಈಗ ಅವರು ಯಾಕೆ ಈ ಪತ್ರ ಬರೆದರು ಎಂದು ಅಚ್ಚರಿಯಾಗಿದೆ. ಮಳೆ ಹೆಚ್ಚಾದಾಗ ಪ್ರವಾಹ ಬರುತ್ತದೆ. ಇದನ್ನು ನಿಭಾಯಿಸುವುದು ಅವರ ಕರ್ತವ್ಯ ಎಂದು ಡಿಸಿಎಂ ಹೇಳಿದರು.

ಕೋರ್ಟ್ ಆದೇಶ ಪಾಲನೆ ವಿಶ್ವಾಸ: ನಟ ಕಮಲ್ ಹಾಸನ್ ಹೇಳಿಕೆ ಬಗ್ಗೆ ನ್ಯಾಯಾಲಯ ಎಲ್ಲರನ್ನು ಗಮನದಲ್ಲಿಟ್ಟುಕೊಂಡು, ರಾಜ್ಯದ ಹಿತ, ಭಾಷೆ ಕಾಪಾಡಲು ತನ್ನ ಅಭಿಪ್ರಾಯ ತಿಳಿಸಿರುತ್ತದೆ. ಕಮಲ್ ಹಾಸನ್ ನ್ಯಾಯಾಲಯದ ಆದೇಶ ಪಾಲನೆ ಮಾಡುತ್ತಾರೆ ಎಂಬ ವಿಶ್ವಾಸವಿದೆ.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ಧ್ಯೇಯ
09

35 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಧ್ಯಯನ



ಬೆಂಗಳೂರು: ಭೂಸಂಪನ್ಮೂಲ ಸಮೀಕ್ಷೆ ಆಧಾರಿತ ಸುಸ್ಥಿರ ಜಲಾನಯನ ನಿರ್ವಹಣೆಯು ಪ್ರಸ್ತುತ ಕರ್ನಾಟಕ ಹಾಗೂ ಒಡಿಸ್ಸಾ ರಾಜ್ಯಗಳಲ್ಲಿ ಅಭಿನಗೊಳಿಸಲಾಗುತ್ತಿದ್ದು, ತಂತ್ರಜ್ಞಾನವನ್ನು ಮುಂದಿನ ದಿನಗಳಲ್ಲಿ ದೇಶದ ಇತರ ರಾಜ್ಯಗಳಿಗೂ ವಿಸ್ತರಿಸಬೇಕು ಎಂದು ಕೇಂದ್ರ ಭೂ ಸಂಪನ್ಮೂಲ ಇಲಾಖೆಯ ಜಂಟಿ ಕಾರ್ಯದರ್ಶಿ ನಿತಿನ್ ಖಾಡೆ ತಿಳಿಸಿದರು.

ಮಂಗಳವಾರ ಜಕೆವಿಕೆಯಲ್ಲಿ ಜೂ. 5ರವರೆಗೆ ಹಮ್ಮಿಕೊಳ್ಳಲಾಗಿರುವ ಭೂ ಸಂಪನ್ಮೂಲ ಸಮೀಕ್ಷೆ ಆಧಾರಿತ ಸುಸ್ಥಿರ ಜಲಾನಯನ ನಿರ್ವಹಣೆ ಕುರಿತ ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ಒಂದು ಬಾರಿ ತೋಟಗಾರಿಕೆಯ ಬೆಳೆಗಳಿಗೆ ಹೂಡಿಕೆ ಮಾಡಿದರೆ ಆರು ಪಟ್ಟು ಆದಾಯ ಪಡೆಯಬಹುದು. ಜಲಾನಯನ ಪ್ರದೇಶದಲ್ಲಿ ಬರುವ ಸರ್ವೆ ನಂಬರ್‌ವಾರು ನಿರ್ದಿಷ್ಟ ಸಮಸ್ಯೆಗಳನ್ನು ಮತ್ತು ಅವುಗಳ ಕಾರಣಗಳನ್ನು ಭೂ ಸಂಪನ್ಮೂಲ ಸಮೀಕ್ಷೆ ಹಾಗೂ ಜಲವಿಜ್ಞಾನ ಅಧ್ಯಯನಗಳಿಂದ ತಿಳಿಯಲಾಗುತ್ತದೆ.ಈಸಮಸ್ಯೆಗಳನ್ನುಸರಿಪಡಿಸಲುನಿಖರವಾದ ಭೂ ಹಾಗೂ ನೀರು ಸಂರಕ್ಷಣೆ ವಿಧಾನಗಳನ್ನು ಆಯ್ಕೆ ಮಾಡಿ ಅನುಭಿನನಗೊಳಿಸುವುದು ಅವಶ್ಯಕವಾಗಿದೆ ಎಂದು ತಿಳಿಸಿದರು.

ರಾಜ್ಯದ 25 ಜಿಲ್ಲೆಗಳಲ್ಲಿ ಜಲವಿಜ್ಞಾನ ಅಧ್ಯಯನ

ವಿಶ್ವಬ್ಯಾಂಕ್ ಸಲಹೆಗಾರರಾದ ಜೆ.ವಿ.ಆರ್ ಮೂರ್ತಿ ಮಾತನಾಡಿ, ರಾಜ್ಯದ 25 ಜಿಲ್ಲೆಗಳಲ್ಲಿ ಸುಮಾರು 35 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಭೂ ಸಂಪನ್ಮೂಲ ಹಾಗೂ ಜಲವಿಜ್ಞಾನಗಳ ಅಧ್ಯಯನಗಳನ್ನು ನಡೆಸಿ ಮಾಹಿತಿಯನ್ನು ಕೇಂದ್ರೀಕರಣ ಮಾಡಲಾಗಿದೆ. ಜತೆಗೆ ಜಲಾನಯನ ನಿರ್ವಹಣೆಗಾಗಿ ಸ್ಥಳ ನಿರ್ದಿಷ್ಟ ಚಟುವಟಿಕೆಗಳನ್ನು ಆಯ್ಕೆ ಮಾಡುವ ಡಿಜಿಟಲ್ ಪರಿಕರಗಳನ್ನು ವ್ಯವಸ್ಥೆ ಮಾಡಲಾಗಿದೆ. ಈ ವ್ಯವಸ್ಥೆಯಿಂದ ಜಲಾನಯನ ಪ್ರದೇಶದ ವಿವರವಾದ ಯೋಜನಾ ವರದಿಯನ್ನು ಕೇವಲ ಆರು ತಿಂಗಳುಗಳಲ್ಲಿ ಪೂರ್ಣಗೊಳಿಸಬಹುದಾಗಿದೆ ಎಂದರು.